ಸಿ.ಸಿ .ನಂ.132/2023		ಪಿಡಬ್ಲೂಃ 1

ದಿನಾಂಕಃ 06-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಿ ಎಸ್ ಹೆಚ್ ವಕೀಲರಿಂದಃ**

5. ನಮ್ಮ ಫಿರ್ಯಾದು ಸಂಸ್ಥೆಯಲ್ಲಿ ಪ್ರತ್ಯೇಕವಾದ ಠರಾವು (ರೆಗ್ಯುಲೇಶನ್ ಬುಕ್) ಬುಕ್ ಇರುತ್ತದೆ ಎಂದರೆ ಸರಿ . ಅಥೋರೈಜೆಶನ್ ಲೇಟರ ಹಾಗೂ ರೆಗ್ಯುಲೇಶನ್ ಬುಕ್ ಗೂ ಸಂಬಂಧ ಇರುತ್ತದೆ . ರೆಗ್ಯುಲೇಶನ್ ಬರವಣಿಗೆಯನ್ನು ಪ್ರಧಾನ ಕಚೇರಿಯಲ್ಲಿ ಮಾಡುತ್ತಾರೆ . ಪ್ರತಿ ಠರಾವಿಗೆ ಸಹಿಯನ್ನು ಯಾರು ಯಾರು ಮಾಡುತ್ತಾರೆ ನೋಡಿ ಹೇಳಬೇಕು . ಠರಾವಿಗೆ ಬ್ಯಾಂಕಿನ ಸೀಲನ್ನು ಹಾಕುತ್ತಾರೆ . ಪ್ರತಿ ಠರಾವಿಗೆ ನಂಬರ ಇರುತ್ತದೆ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ವರ್ಷಕ್ಕೆ ಅಂದಾಜು ಎಷ್ಟು ಠರಾವು ಆಗುತ್ತದೆ ನೆನಪಿಲ್ಲ. ನಾನು ಹಾಜರು ಪಡಿಸಿದ ನಿಪಿ -18 ಠರಾವಿನಲ್ಲಿ ಠರಾವಾದ ದಿನಾಂಕ ಹಾಗೂ ನಂಬರ ಇಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಒಬ್ಬರೇ ಮ್ಯಾನೇಜಿಂಗ್ ಡೈರೆಕ್ಟರ ಇದ್ದಾರೆ . ದಿಃ 08-07-2024 ರಲ್ಲಿ ಇರುವ ಮ್ಯಾನೇಜಿಂಗ್ ಡೈರೆಕ್ಟರ ಹೆಸರು ಡ್ಯಾನಿ ಫರ್ನಾಂಡಿಸ್ ಆಗಿರುತ್ತದೆ . ನಾನು ಫಿರ್ಯಾದು ಸಂಸ್ಥೆಗೆ ಆರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ . ನಿಪಿ-18 ರಲ್ಲಿರುವ ಸಹಿ ಮ್ಯಾನೇಜಿಂಗ್ ಡೈರೆಕ್ಟರವರ ಸಹಿ ಆಗಿರುತ್ತದೆ . ಮೊದಲು ಜಾರ್ಜ ಫರ್ನಾಂಡಿಸ್ ಮ್ಯಾನೇಜಿಂಗ್ ಡೈರೆಕ್ಟರ ಇದ್ದರು ನಂತರ ಈಗ ಇರುವ ಡ್ಯಾನಿ ಫರ್ನಾಂಡಿಸ್ ಮ್ಯಾನೇಜಿಂಗ್ ಡೈರೆಕ್ಟರ ಇರುತ್ತಾರೆ . ಅವರು ಯಾವ ತಾರೀಖಿನಿಂದ ಯಾವ ವರ್ಷದಿದ ಕೆಲಸ ಮಾಡುತ್ತಿದ್ದರು ನೆನಪಿಲ್ಲ. ಅಂದಾಜು ಹೇಳಲು ನೆನಪಾಗುತ್ತಿಲ್ಲ . ನಿಪಿ-1 ರಲ್ಲಿರುವ ಸಹಿ ಮ್ಯಾನೇಜಿಂಗ್ ಡೈರೆಕ್ಟರ ಜಾನ್ ಫರ್ನಾಂಡಿಸ್ ರವರದ್ದು ಆಗಿರುತ್ತದೆ . ನಿಪಿ-1 ರಲ್ಲಿ ಯಾವ ತಾರೀಖನಂದು ಠರಾವು ಆಯಿತು ಹಾಗೂ ಠರಾವಿನ ನಂಬರ ಇಲ್ಲ ಎಂದರೆ ಸರಿ . ನಿಪಿ-18 ಹಾಗೂ ನಿಪಿ-1 ರಲ್ಲಿರುವ ಸಹಿಗಳಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ನಿಪಿ-1 ಕ್ಕೆ ಸಹಿ ಹಾಕಿದ ಮ್ಯಾನೇಜಿಂಗ್ ಡೈರೆಕ್ಟರ ಬೇರೆ ಹಾಗೂ ನಿಪಿ-18 ಕ್ಕೆ ಸಹಿ ಹಾಕಿದ ಮ್ಯಾನೇಜಿಂಗ್ ಡೈರೆಕ್ಟರ ಬೇರೆ ಎಂದು ನುಡಿದಿರುತ್ತಾರೆ. ನಿಪಿ-1 ನ್ನು ದಿಃ 08-12-2023 ರಂದು ಮಾಡಲಾಗಿದೆ ಹಾಗೂ ಇನ್ನೊಂದು ನಿಪಿ -1 ನ್ನು ದಿಃ 25-

07-2019 ರಂದು ಮಾಡಲಾಗಿದೆ ಎಂದರೆ ಸಾಕ್ಷಿ ಮೊದಲಿರುವ ಮ್ಯಾನೇಜರ್ ಚೆಂಜ್ ಆದ ನಂತರ ಇನ್ನೊಂದು ಅಥೋರೈಜೇಶನ್ ಲೇಟರ ಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ. ದಿಃ 25-07-2019 ರ ನಿಪಿ-1 ದಾಖಲಾತಿಯಲ್ಲಿಯೂ ಕೂಡ ರೆಜ್ಯುಲೇಶನ್ ನಂಬರ ಇಲ್ಲ ಎಂದರೆ ಸರಿ . ನಾವು ಹಾಜರು ಪಡಿಸಿದ ಅಥೋರಿಟಿ ಲೇಟರ್ ಗಳು ಕಾನೂನು ಬದ್ಧ ಅಥೋರಿಟಿ ಲೇಟರಗಳು ಅಲ್ಲ ಎಂದರೆ ಸರಿಯಲ್ಲ.

6. ಆರೋಪಿಗೆ ನಾವು ನೋಟಿಸನ್ನು ಕೊಟ್ಟಿದ್ದೇವೆ . ದಾಖಲಾತಿಯನ್ನು ನಾನು ನೋಡಿದ್ದೇನೆ. ನೋಟಿಸನ್ನು ನೋಟಿಸನ್ನು 2021 ರಲ್ಲಿ ನೀಡಿರುತ್ತೇವೆ . ಸದರಿ ನೋಟಿಸನ್ನು ನೀಡುವಾಗ ವಕೀಲರಿಗೆ ಮಾಹಿತಿಯನ್ನು ಆಗಿನ ಮ್ಯಾನೇಜರ ರೋಹಿತ ಮೋಗೇರರವರು ಕೊಟ್ಟಿರುತ್ತಾರೆ . ನೋಟಿಸನ್ನು ಕೊಡುವಾಗ ಬ್ಯಾಂಕಿನ ಒಬ್ಬ ವ್ಯಕ್ತಿ ಸಂಸ್ಥೆಯನ್ನು ಪ್ರತಿನಿಧಿಸಬೇಕಾಗುತ್ತದೆ ಎಂದರೆ ಸರಿ . ನೋಟಿಸಿನಲ್ಲಿ ಮ್ಯಾನೇಜರ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ ಹೆಸರು ಇಲ್ಲದೇ ಇದ್ದರೆ ಅದು ಕಾನೂನು ಬದ್ಧವಾಗಿರುವುದಿಲ್ಲ ಎಂದರೆ ಸರಿಯಲ್ಲ , ಕಾನೂನುಬದ್ಧವಾಗಿರುತ್ತದೆ . ನ್ಯಾಯಾಲಯದಲ್ಲಿ ಸುಮಾರು ಪ್ರಕರಣಗಳನ್ನು ಹಾಕಿದ್ದೇವೆ, ಸಂಖ್ಯೆಗಳು ನೆನಪಿಲ್ಲ. ನೋಟಿಸನ್ನು ಕೊಡುವಾಗ ನಮ್ಮ ಸಂಸ್ಥೆಯ ಹೆಸರನ್ನು ಮಾತ್ರ ಕಾಣಿಸುತ್ತೇವೆ. ಮ್ಯಾನೇಜಿಂಗ್ ಡೈರೆಕ್ಟರವರ ಹೆಸರನ್ನು ಕಾಣಿಸುವುದಿಲ್ಲ. ಮ್ಯಾನೇಜಿಂಗ್ ಡೈರೆಕ್ಟರ ಅಥವಾ ಅಥೋರಿಟಿ ಹೋಲ್ಡರವರ ಹೆಸರು ತೋರಿಸದೆ ಹೋದರೆ ಅದು ಅಂತಹ ನೋಟಿಸು ಬೇಕಾಯ್ದೆಶೀರ ಇರುತ್ತದೆ ಎಂದರೆ ಸರಿಯಲ್ಲ. ನೋಟಿಸಿನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ , ಅಥೋರಿಟಿ ಹೆಸರು ಉಲ್ಲೇಖ ಇಲ್ಲ ಎಂದರೆ ಸರಿ . ಆದರೆ ನಮ್ಮ ಸಂಸ್ಥೆಯ ಹೆಸರು ಹಾಗೂ ಸಾಲದ ವಿವರಣೆ ಇದೆ ಎಂದು ನುಡಿದಿರುತ್ತಾರೆ. ನಮ್ಮ ಸಂಸ್ಥೆಯ 111 ಬ್ರಾಂಚ್ ಗಳು ಇರುತ್ತವೆ. ಪ್ರತಿ ಬ್ರಾಂಚಿಗೂ ಮ್ಯಾನೇಜರ್ ಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ . ಕಾಲ ಕಾಲಕ್ಕೆ ಮ್ಯಾನೇಜರ್ ಗಳು ಬದಲಾವಣೆ ಆಗುತ್ತವೆ ಎಂದರೆ ಸರಿ . ನೋಟಿಸಿನಲ್ಲಿ ಮ್ಯಾನೇಜರ್ ನ ಹೆಸರು ಅಥವಾ ಅಥೋರಿಟಿ ಹೊಲ್ಡರ ನ ಹೆಸರು ಇಲ್ಲದೇ ಇದ್ದರೆ ಅಂತಹ ನೋಟಿಸು ಗೊಂದಲಮಯವಾಗಿರುತ್ತದೆ ಎಂದರೆ ಸರಿಯಲ್ಲ.

7. ಚೆಕ್ ನಲ್ಲಿರುವ ಬರವಣಿಗೆ ಮತ್ತು ಸಹಿ ನನ್ನ ಸಮಕ್ಷಮ ಆಗಿಲ್ಲ . ಚೆಕ್ ನಲ್ಲಿರುವ ಬರವಣಿಗೆ ಹಾಗೂ ಸಹಿ ಯಾರ ಸಮಕ್ಷಮ ಆಗಿದೆ ಆ ಬಗ್ಗೆ ನಿರ್ದಿಷ್ಟ ಮಾಹಿತಿಯನ್ನು ತೆಗೆದುಕೊಂಡಿರುತ್ತೇನೆ . ನನ್ನ ಮಾಹಿತಿ ಪ್ರಕಾರ ಚೆಕ್ ನಲ್ಲಿರುವ ಬರವಣಿಗೆ ಹಾಗೂ ಸಹಿ ಆ ಸಂದರ್ಭದಲ್ಲಿರುವ ಮ್ಯಾನೇಜರ್ ನ ಸಮಕ್ಷಮ ಆಗಿರುತ್ತದೆ . ಮ್ಯಾನೇಜರ್ ರವರ ಹೆಸರು ರೋಹಿತ ಮೋಗೆರ . ಅವರು ನನಗೆ ಅವರ ಸಮಕ್ಷಮ ಚೆಕ್ ನಲ್ಲಿರುವ ಬರವಣಿಗೆ ಹಾಗೂ ಸಹಿ ಆಗಿದೆ ಎಂದು ಮಾಹಿತಿ ಕೊಟ್ಟಿಲ್ಲ . ಈ 2-3 ವರ್ಷಗಳಲ್ಲಿ ಸದರಿ ರೋಹಿತ ಮೋಗೆರರವರನ್ನು ಭೇಟಿ ಮಾಡಿ ಚೆಕ್ ನಲ್ಲಿರುವ ಬರವಣಿಗೆ ಹಾಗೂ ಸಹಿ ಹಾಕಿದ ಬಗ್ಗೆ ಕೇಳಿರುತ್ತೇನೆ. ಕೇಳಿ ಮಾಹಿತಿಯನ್ನು ಪಡೆದುಕೊಂಡಿದ್ದೇನೆ . ದಿನಾಂಕ ಕಾಲಂನ ಶಾಯಿ ಹಾಗೂ ಪೇಯಿ ಹಾಗೂ ಅಮೌಂಟ್ ನ ಕಾಲಂನ ಶಾಯಿ ತುಂಬಾ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ . ನಿಪಿ-2(ಎ) ಶಾಯಿಯ ಗುರುತು ಹಾಗೂ ಬಾಕಿ ಬರವಣಿಗೆ ಶಾಯಿಗೂ ತುಂಬಾ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಕೈಬರಹ ತಜ್ಞರಿಗೆ ಕಳುಹಿಸಲು ನಮ್ಮ ಯಾವುದೇ ಅಭ್ಯಂತರ ಇಲ್ಲ . ಚೆಕ್ ನಲ್ಲಿರುವ ಎಲ್ಲಾ ಬರವಣಿಗೆ ಹಾಗೂ ಸಹಿ ಆರೋಪಿಯ ಕೈಬರಹದಲ್ಲಿ ಇಲ್ಲ ಎಂದರೆ ಸರಿಯಲ್ಲ.

8. ನಿಪಿ-8 ರಲ್ಲಿರುವ ತಿದ್ದುಪಡಿಗಳನ್ನು ಯಾರು ಮಾಡಿದ್ದಾರೆ ಮಾಹಿತಿ ಇಲ್ಲ. ಆರೋಪಿಗೆ ಬುದ್ಯಾಶಿಕ್ಷೆ ಕೊಡಿಸಬೇಕೆಂದು ಡೊಂಗಿ ಕಾಗದ ಪತ್ರಗಳನ್ನು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ . ಆರೋಪಿಯ ಸಹಿಯನ್ನು ಗುರುತಿಸುತ್ತೇನೆ. ನಿಪಿ-7 ರಲ್ಲಿರುವ ಸಹಿ ಚೆಕ್ ನಲ್ಲಿರುವ ಸಹಿ ತುಂಬಾ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಾವು ಕಳುಹಿಸಿದ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ . ಆದರೆ ಆರೋಪಿ ಬೇರೆ ಕಡೆಯಿಂದ ಮಾಹಿತಿ ತೆಗೆದುಕೊಂಡು ನಮಗೆ ಉತ್ತರವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನೋಟಿಸು ತಲುಪಿದೆ ಎಂದು ನುಡಿದಿರುತ್ತಾರೆ . ಆರೋಪಿಯ ನಿರ್ದಿಷ್ಟ ವಿಳಾಸದ ಬಗ್ಗೆ ನಮ್ಮ ಸಂಸ್ಥೆಯಲ್ಲಿ ಕಾಗದ ಪತ್ರ ಇದೆ . ಕೆ ವಾಯ್ ಸಿ ದಾಖಲಾತಿಗಳು ಇವೆ . ಸ್ಯಾಲರಿ ಸ್ಲಿಪ್ ಗಳು ಇವೆ . ನಮ್ಮ ಬಳಿ

ಯಾವುದೇ ಕಾಗದ ಪತ್ರಗಳ ಇಲ್ಲದೇ ಇದ್ದರೂ ಕಾಗದ ಪತ್ರಗಳು ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 2019 ರಲ್ಲಿ ಸಾಲವನ್ನು ಕೊಟ್ಟಿರುತ್ತೇನೆ. ರಿನಿವಲ್ ಓಪಶನ್ ಇಲ್ಲ . ನಮ್ಮ ಬೈಲಾದಲ್ಲಿ ಅದರ ಉಲ್ಲೇಖ ಇಲ್ಲ . ನಿಪಿ-10 ರಿಂದ ನಿಪಿ-14 ರನ್ನು ಜರೆಕ್ಸ ಮಾಡಿ ಸೀಲ್ ಹೊಡೆದ ಹಾಗೆ ಕಾಣುತ್ತದೆ ಎಂದರೆ ಸಾಕ್ಷಿ ಓರಿಜನಲ್ ಫೈಲ್ ನ್ನು ಜರೆಕ್ಸ ಮಾಡಿ ಸೀಲು ಹಾಕಿರುತ್ತೇವೆ ಎಂದು ನುಡಿದಿರುತ್ತಾರೆ . ಈ ಎಲ್ಲಾ ಕಾಗದ ಪತ್ರಗಳಲ್ಲಿರುವ ಸಹಿ ಆರೋಪಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ . ಈ ರೀತಿಯ ಜರೆಕ್ಸ ಸಹಿಯನ್ನು ನೋಡಿ ಓರಿಜನಲ್ ಸಹಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಯನ್ನು ಸಿಕ್ಕಿ ಹಾಕಿಸಬೇಕೆಂದು ಈ ರೀತಿ ಜರೆಕ್ಸ ಪ್ರತಿಗಳನ್ನು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನೋಟಿಸಿಗೆ ಉತ್ತರವನ್ನು ಕೊಟ್ಟಿರುತ್ತಾರೆ ಎಂದರೆ ನೆನಪಿಲ್ಲ ದಾಖಲಾತಿ ನೋಡಿ ಹೇಳಬೇಕು. ನಾನು ಪದೇ ಪದೇ ನೆನಪಿಲ್ಲ ಕಾಗದ ಪತ್ರಗಳನ್ನು ನೋಡಿ ಹೇಳಬೇಕೆಂದು ನುಣುಚಿಕೊಳ್ಳಲು ಹೇಳುತ್ತಿದ್ದೇನೆ, ಕಾರಣ ನನಗೆ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಆರೋಪಿ ನಮ್ಮಿಂದ ಯಾವುದೇ ಸಾಲವನ್ನು ಪಡೆದಿಲ್ಲ ಹಾಗೂ ಯಾವುದೇ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ಆರೋಪಿ ಯಾವುದೇ ಅಪರಾಧವನ್ನು ಮಾಡಿಲ್ಲ ಎಂದರೆ ಸರಿಯಲ್ಲ . ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.